



ಚಿಕ್ಕಪುಟ್ಟ ವಿಷಯಗಳನ್ನು ಹೇಳುತ್ತಿದ್ದರು. ಏನೂ ಗೊತ್ತಿಲ್ಲದೆ ಬಂದ ನಾನು ಅದನ್ನು ಖುಷಿಯಿಂದ ಮಾಡುತ್ತಿದ್ದೆ. ಆನಂತರ, ಯಾವುದೇ ಸಿನಿಮಾ ಶೂಟಿಂಗ್ ಆಗಿರಲಿ, ನಟನೆ ಕೆಲಸ ಮುಗಿಸಿ ಕ್ಯಾರಾವ್ಯಾನ್‌ನಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತಿರಲಿಲ್ಲ. ಬೇರೆಯವರ ನಟನೆ, ನಿರ್ದೇಶನವನ್ನು ನೋಡುತ್ತಾ ಕುಳಿತಿರುತ್ತಿದ್ದೆ' ಎಂದು ಉತ್ಸಾಹ ತುಂಬಿ ಮಾತನಾಡುತ್ತಾರೆ.

ನಿರ್ದೇಶನದ ಬಗೆಗಿನ ಅವರ ಆಸೆಗೆ ಕಾಲ ಕೂಡಿಬಂದಿದ್ದು ಕೊರೊನಾ ಲಾಕ್‌ಡೌನ್ ಸಮಯದಲ್ಲಿ. ಆ ಸಮಯದಲ್ಲಿ 'ಓ ನನ್ನ ಚೇತನ' ಎಂಬ ಮಕ್ಕಳ ಸಿನಿಮಾ ನಿರ್ದೇಶನ ಮಾಡಿದರು. ಆ ಸಿನಿಮಾಗೆ ಬೆಂಗಳೂರಿನಲ್ಲಿ ನಡೆದ ಚಲನಚಿತ್ರೋತ್ಸವದಲ್ಲಿ 'ಉತ್ತಮ ಸಿನಿಮಾ' ಎಂಬ ಪ್ರಶಸ್ತಿ ದೊರೆತಿದೆ. ಸ್ಮಾರ್ಟ್‌ಫೋನ್‌ನಂಥ ಗ್ಯಾಜೆಟ್‌ಗಳ ಜೊತೆಗಿನ ಮಕ್ಕಳ ನಂಟಿನ ಕಥಾಹಂದರದ ಈ ಸಿನಿಮಾಗೆ ಅಪ್ಪು ಮಕ್ಕಳ ಚಲನಚಿತ್ರೋತ್ಸವದಲ್ಲಿ 'ಉತ್ತಮ ನಿರ್ದೇಶನ' ಪ್ರಶಸ್ತಿಯನ್ನೂ ಪಡೆದುಕೊಂಡಿದೆ.

ಈ ಪ್ರಶಸ್ತಿ, ನಿರ್ದೇಶನದ ಅವರ ಆಸೆಗೆ ನೀರೆರೆದಿದೆ. 'ನಟಿಯಾದರೆ, ನಮ್ಮ ಪಾತ್ರದ ಬಗ್ಗೆಯಷ್ಟೇ ಯೋಚಿಸುತ್ತೇವೆ. ಆದರೆ ನಿರ್ದೇಶನ ಇಡೀ ಸಿನಿಮಾದ ಜವಾಬ್ದಾರಿ. ಅಂಥ ಜವಾಬ್ದಾರಿಯನ್ನು ಹೊರುವ ಧೈರ್ಯ ಇರಬೇಕು. ಅಂಥ ಧೈರ್ಯ ಇನ್ನಷ್ಟು ಬರಬೇಕಿದೆ' ಎನ್ನುವ ಅವರು, ಸಿನಿಮಾದ ನಿರ್ದೇಶನ, ಸಿನಿಮಾಟೊಗ್ರಫಿಯಂಥ ತಾಂತ್ರಿಕ ವಿಷಯದಲ್ಲಿ ಹೆಣ್ಣುಮಕ್ಕಳು ಇನ್ನಷ್ಟು ಅವಕಾಶ ಸೃಷ್ಟಿಸಿಕೊಳ್ಳಬೇಕು ಎಂದು ಹೇಳುತ್ತಾರೆ.

ಒಂದೇ ಸೂತ್ರಕ್ಕೆ ತಮ್ಮನ್ನು ತಾವು ಕಟ್ಟಿಹಾಕಿಕೊಳ್ಳುವುದಿಲ್ಲ ಎನ್ನುವುದು ಪಾತ್ರದ ಬಗೆಗಿನ ಅವರ ವಿವರಣೆ. ಇಂಥದ್ದೇ ಪಾತ್ರಗಳಿಗೆ ತಮ್ಮನ್ನು ತಾವು ಸೀಮಿತ ಮಾಡಿಕೊಳ್ಳುವುದಿಲ್ಲ ಎನ್ನುವ ಅವರು, ಭಿನ್ನತೆಯನ್ನು ನೆಚ್ಚಿಕೊಂಡಿದ್ದಾರೆ.

'ನನಗೆ ಇಂಥದ್ದೇ ಪಾತ್ರ ಬೇಕೆಂಬ ನಿರೀಕ್ಷೆಗಳಿಲ್ಲ. ನಾಳೆ, ಇಂಥ ಕಥೆಯ ಸಿನಿಮಾ ಎಂದು ಬಂದರೆ, ಆ ಕಥೆಗೆ ತಕ್ಕಂತೆ ನನ್ನನ್ನು ನಾನು ತಯಾರಿ ಮಾಡಿಕೊಳ್ಳುತ್ತೇನೆ. ಆ ಪಾತ್ರ ನನಗೋಸ್ಕರ ಬಂದಿದೆ ಎಂದ ಮೇಲೆ ಅದನ್ನು ಖುಷಿಯಿಂದ ಮಾಡುತ್ತೇನೆ. ನನಗೆ ಬೇರೆ ಬೇರೆ ರೀತಿಯ ಪಾತ್ರಗಳು ಬರುತ್ತಿವೆ. ನನ್ನನ್ನು ನಾನು ಅದಕ್ಕೆ ತಕ್ಕಂತೆ ಬದಲಿಸಿಕೊಳ್ಳುತ್ತೇನೆ. ಭಿನ್ನತೆಯನ್ನು ಖುಷಿಯಿಂದ ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ನನ್ನ ಸಾಮರ್ಥ್ಯ ತೋರುವ ಪ್ರಯತ್ನ ಮಾಡುತ್ತೇನೆ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಸದ್ಯ, ಅಭಿಮನ್ಯು ಕಾಶಿನಾಥ್‌ಗೆ ಜೋಡಿಯಾಗಿ 'ಸೂರಿ ಲವ್ಸ್ ಸಂಧ್ಯಾ' ಸಿನಿಮಾದಲ್ಲಿ ಅವರು ನಟಿಸುತ್ತಿದ್ದು, ಅದರಲ್ಲಿನ ಮಧ್ಯಮ ವರ್ಗದ ಹುಡುಗಿಯ ಪಾತ್ರಕ್ಕೆ ಅಣಿಯಾಗಿದ್ದಾರೆ. ಚಂದನ್ ಶೆಟ್ಟಿ ಅವರೊಂದಿಗೆ 'ಸೂತ್ರಧಾರಿ' ಸಿನಿಮಾ, ಮತ್ತೆ ರವಿಚಂದ್ರನ್ ಅವರೊಂದಿಗೆ 'ಗೌರಿಶಂಕರ' ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದು, 'ಪೆಂಟಗಾನ್' ಸಿನಿಮಾ ಬಿಡುಗಡೆಗೆ ಸಿದ್ಧತೆ ನಡೆಯುತ್ತಿದೆ.

ಇನ್ನೂ ಎರಡು ಮೂರು ಸಿನಿಮಾ ಘೋಷಣೆ ಆಗಬೇಕಿದ್ದು, ನಟನೆಯೊಂದಿಗೆ, ಸಿನಿಮಾ ನಿರ್ದೇಶನ, ನಿರ್ಮಾಣ ಮಾಡುವ ಆಸೆಯನ್ನು ವ್ಯಕ್ತಪಡಿಸುತ್ತಾರೆ.

'ಯಾವುದೇ ಹಿನ್ನೆಲೆಯಿಲ್ಲದೆ ಬಂದವಳು ನಾನು. ಇಲ್ಲೇ ಬೆಳೀಬೇಕು. ಎಷ್ಟಾಗುತ್ತೋ ಅಷ್ಟು ಉತ್ತಮ ಸಿನಿಮಾ ಮಾಡಿ, ಮುಂದೆ ಸಿನಿಮಾ ನಿರ್ಮಾಣ ಮಾಡಬೇಕು. ಇಲ್ಲೊಂದು ಗುರುತು ಉಳಿಸಬೇಕು' ಎಂದು ನಗುತ್ತಾರೆ.